ವಿದ್ಯಾಭ್ಯಾಸದ ಇಲಾಖೆ.

ಸ್ ೧೮೮೯ನೇ ಇಸವಿ ಮೇ ತಾರೀಖು 6.

ಮೈಸೂರು ದೇಶೀ ಪರೀಕ್ಷೆ.

ಸ್ ೧೮೯೦ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗೋಸ್ಕರ ಈ ಕೆಳಗೆ ನಮೂದಿಸಲ್ಪಟ್ಟಂತೆ ಬಹುಮಾನಗಳು ಬಿಂತಾಮೀ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಾದ, ಆಳಿಂಗ್ಯಾಚಾರ್ಯರಿಂದ ಕೊಡಲ್ಪಡುವವು:—

(i) ಪಿಲ್ಲಪಟ್ಟಿ ತಾಲ್ಲೂಕು ಗವರ್ಣಮೆಂಟ್ ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ಪೈಕಿ 'ಕನ್ನಡ ಭಾಷಾ ಗ್ರಂಥಗಳಲ್ಲಿ' ಅಧಿಕವಾದ ನಂಬರುಗಳನ್ನ ಪಡೆಯುವಂಥಾ ದೇಶೀ ಪರೀಕ್ಷಾ ವಿದ್ಯಾರ್ಥಿಗೆ 'ಕನ್ನಡ ಸಟೀಕಾ ಗುರುಬಾಲಪ್ರಬೋಧಿಕ.'

(ii) ಪಿಲ್ಲಪಟ್ಟಿ ತಾಲ್ಲೂಕು ಗವರ್ಣಮೆಂಟು ಕನ್ನಡ ಸ್ಕೂಲಿನಲ್ಲಿ ತೇರ್ಗಡೆ ಹೊಂದುವವರ ಪೈಕಿ 'ಗಣಿತದಲ್ಲಿ' ಅಧಿಕವಾದ ನಂಬರುಗಳನ್ನ ಪಡೆಯುವಂಥಾ ದೇಶೀ ಪರೀಕ್ಷಾ ವಿದ್ಯಾರ್ಥಿಗೆ.— 'ಅಷ್ಟಾದಶಪರ್ವ ಕನ್ನಡ ಮಹಾಭಾರತ ಮೂಲ.'

(iii) ಪಿಲ್ಲಪಟ್ಟಿ ತಾಲ್ಲೂಕು ಗವರ್ಣಮೆಂಟು ಕನ್ನಡ ಸ್ಕೂಲಿನಲ್ಲಿ ಉಪಾಧ್ಯಾಯರ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರ ಪೈಕಿ 'ಶಾಸ್ತ್ರದಲ್ಲಿ' ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ.— 'ಮೂವ್ವತ್ತನಾಲ್ಕು ಸಂಧಿಗಳುಳ್ಳ ಸಟೀಕಾ ಕನ್ನಡ ಜೈಮಿನಿ ಭಾರತ.'

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟೆರಿ.